ಅಧ್ಯಕ್ಷರು :— ಪೋಸ್ಟ ಮಾರ್ಟಮ್ ರಿಪೋರ್ಟ್ ಏನೆಂದು ಬಂದಿದೆ?

ಶ್ರೀ ಬಿ.ಬಿ. ಶಿವಪ್ಪ :— ನಿಶಾ ತೆಗೆದುಕೊಂಡಿಲ್ಲವೆಂದು ಬಂದಿದೆ.

ಅಧ್ಯಕ್ಷರು :— ಆಲ್ಕೋಹಾಲ್ ತೆಗೆದುಕೊಂಡಿಲ್ಲ ಎಂದು ಬಂತೇ? ಆಲ್ ರೈಟ್. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಪ್ರಕೃತಿ ವಿಕೋಪ ನಿಧಿಯನ್ನು ಯಾವ ಯಾವ ರೀತಿ ಖರ್ಚು ಮಾಡಬೇಕೆಂದು ಹೇಳಿ ಕೆಲವು ಸಾರಿ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ನಾವೂ ಕೊಟ್ಟಿದ್ದೇವೆ. ಈಗ ಮೂರು ಜನರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದರೆ ಆ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಕಾಣಿಸುತ್ತದೆ. ಆದರೆ ಮತ್ತೊಂದು ಸಾರಿ ನೋಡುತ್ತೇನೆ, ಆ ವ್ಯಾಪ್ತಿಯೊಳಗಡೆ, ಮಾರ್ಗಸೂಚಿಯೊಳಗಡೆ ಬರುವುದಿದ್ದರೆ ಅವರು ಸತ್ತಿರುವುದು ನಿಜವಾಗಲೂ ಪ್ರಕೃತಿವಿಕೋಪದಿಂದಾಗಿದ್ದರೆ ಪುನರ್ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

4.10 ಪಿ.ಎಂ.

ಒ) ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್‌ಗಳ ಕುರಿತು.

ಶ್ರೀಕೆ. ಜಯರಾಮ ಶೆಟ್ಟಿ (ಉಳ್ಳಾಲ) :— ಮಾನ್ಯ ಅಧ್ಯಕ್ಷರೆ, ಮಂಗಳೂರಿನಲ್ಲಿ ಕರ್ನಾಟಕ ಪಾಲಿಟೆಕ್ನಿಕ್ ಇದೆ. ಹಾಗೆಯೇ ಮಹಿಳೆಯರ ಒಂದು ಪಾಲಿಟೆಕ್ನಿಕ್ ಕೂಡ ಇದೆ. ರಾಜ್ಯ ಸರ್ಕಾರ ಇತ್ತೀಚೆಗೆ ಪಾಲಿಟೆಕ್ನಿಕ್‌ಗೆ ಸ್ವಾಯತ್ತತೆಯನ್ನು ಕೊಡುತ್ತೇನೆಂದು ಘೋಷಣೆ ಮಾಡಿದೆ. ಈ ಬಗ್ಗೆ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ. ತಮ್ಮ ಸ್ವಾಯತ್ತತೆ ಯಾವ ತರಹದ್ದು, ಯಾವ ರೀತಿಯಲ್ಲಿ ಕೊಡುತ್ತಿದ್ದೀರಿ ಎಂದು ತಾವು ತಿಳಿಸಿದರೆ ಒಳ್ಳೆಯದು. ಜೊತೆಗೆ ಆ ಪಾಲಿಟೆಕ್ನಿಕ್ ನಲ್ಲಿ ಕಳೆದ 25 ವರ್ಷಗಳಿಂದ ವಿದ್ಯಾರ್ಥಿಗಳು ಬಹಳಷ್ಟು ಸತ್ಯಾಗ್ರಹವನ್ನು ಮಾಡಿಕೊಂಡುಬಂದಿದ್ದಾರೆ. ಮಂಗಳೂರಿನಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಲ್ಲಿ ನಡೆದಷ್ಟು ಸತ್ಯಾಗ್ರಹಗಳು ಬೇರೆ ಯಾವ ಕಾಲೇಜುಗಳಲ್ಲೂ ನಡೆದಿಲ್ಲ. ಏಕೆಂದು ಹೇಳಿದರೆ ಸರಿಯಾದ ಸಮಯಕ್ಕೆ ಅಲ್ಲಿಗೆ ಉಪಾಧ್ಯಾಯರ ನೇಮಕಾತಿ ಆಗದಿರುವುದು. ಸಿಲಬಸ್ ಆಗದೇ ಇರುವಂತಹದು. ವಿದ್ಯಾಭ್ಯಾಸಕ್ಕೆ ಬೇಕಾದಂತಹ ಯಾವ ಪರಿಕರಗಳೂ ಕೂಡ ಅಲ್ಲಿ ಸಿಗದೇ ಇರುವಂತಹದು. ಜೊತೆಗೆ ಈಗ ಸರ್ಕಾರದ ಕಾನೂನು ಪ್ರಕಾರ ಶೇಕಡಾ 30ರಷ್ಟು ಮಹಿಳೆಯರನ್ನು ಅಲ್ಲಿ ನೇಮಕ ಮಾಡುತ್ತಿದ್ದಾರೆ. ಆದರೆ ಆ ಮಹಿಳೆಯರಿಗೆ ವಸತಿಯ ವ್ಯವಸ್ಥೆ ಇಲ್ಲ. ಹುಡುಗಿಯರ ಪಾಲಿಟೆಕ್ನಿಕ್‌ನಲ್ಲಿ ವಸತಿಯ ವ್ಯವಸ್ಥೆಯಂತೂ ಇಲ್ಲ. ಏಕೆಂದರೆ ಇಡೀ ಜಿಲ್ಲೆಯಿಂದ ಆ ಕಾಲೇಜಿಗೆ ವಿದ್ಯಾರ್ಥಿನಿಯರು ಬರುತ್ತಿದ್ದಾರೆ. ಆದ್ದರಿಂದ ಅವರು

ಉಳಿದುಕೊಳ್ಳುವುದಕ್ಕೆ ಬೇಕಾದಂತಹ ಯಾವುದೇ ವಸತಿ ವ್ಯವಸ್ಥೆ ಇಲ್ಲ. ಜೊತೆಗೆ ಎಲೆಕ್ಟ್ರಾನಿಕ್ ಲ್ಯಾಬರೇಟರಿ ಮಾಡಿಕೊಂಡಿದ್ದೀರಿ. ಆದರೆ ಅದಕ್ಕೆ ಬೇಕಾದಂತಹ ಕಟ್ಟಡವನ್ನು ನೀವು ಒದಗಿಸಲಿಲ್ಲ. ಇಡೀ ರಾಜ್ಯದಲ್ಲಿ ಪಾಲಿಟೆಕ್ನಿಕ್‌ಗಳಿಗೆ ಸುಮಾರು 30 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಸುಮಾರು ಎರಡು ಮೂರು ಕೋಟಿ ರೂಪಾಯಿ ಕಟ್ಟಲಿಕ್ಕೆ ಬೇಕು. ಮೂರು ಕೋಟಿ ರೂಪಾಯಿಗಳಲ್ಲಿ ನೀವು 30 ಲಕ್ಷ ರೂಪಾಯಿಗಳನ್ನು ಒದಗಿಸಿದರೆ ಈ ಒಂದು ಕಾಲೇಜಿಗೆ ಬೇಕಾದಂತಹ ಕಟ್ಟಡವನ್ನೂ ಕೂಡ ಒದಗಿಸುವುದಕ್ಕೆ ಸಾಧ್ಯತೆ ಇಲ್ಲ. ಆದ್ದರಿಂದ ಅಲ್ಲಿ ಉಪಾಧ್ಯಾಯರುಗಳ ಕೊರತೆ ಶೇಕಡಾ 40 ರಷ್ಟು ಉಂಟು. ಕಳೆದಸಲ ಪಾಲಿಮಾರ್ ಸೆಕ್ಷನ್‌ನಲ್ಲಿ ಬೇಕಾದಂತಹ ಉಪಾಧ್ಯಾಯರುಗಳು ಇಲ್ಲದೆ ಮತ್ತು ಅವರಿಗೆ ಸಿಲಬಸ್ ಬಿಟ್ಟು ಹೊರಗೆ ಬಂದಂತಹ ಪ್ರಶ್ನೆಗಳೂ ಸಾಕಷ್ಟು ಇದ್ದುದರಿಂದ ಮಕ್ಕಳಿಗೆ ಉತ್ತರ ಮಾಡಲಿಕ್ಕೆ ಆಗಲಿಲ್ಲ. ಅಲ್ಲಿಯ ಫಲಿತಾಂಶಗಳೂ ಕೂಡ ಕಡಿಮೆ ಆಗುತ್ತಿದೆ ಎಂದು ದೂರಿಕೊಳ್ಳುತ್ತಿದ್ದಾರೆ. ಇನ್ನೊಂದು ಪ್ರಶ್ನೆ ಏನು ಅಂದರೆ ಇಡೀ ರಾಜ್ಯದ ಪಾಲಿಟೆಕ್ನಿಕ್ ನಲ್ಲಿ ಗಡಿ ಕನ್ನಡಿಗರಿಗೆ ಒಂದು ಕಾಲೇಜಿನಲ್ಲಿ ಕೇವಲ ಒಂದು ಸೀಟು ಕೊಟ್ಟಿದ್ದಾರೆ. ತಾಯಿ ಅಥವಾ ತಂದೆ ಅವರಿಗೆ ಕರ್ನಾಟಕದವರು ಆಗಿರುತ್ತಾರೆ. ಉಳಿದ ಕಡೆಯಲ್ಲಿ ಅವರು ಕೇರಳದಲ್ಲಿ ಇರುತ್ತಾರೆ. ಆದರೆ ಇಲ್ಲಿ 800 ವಿದ್ಯಾರ್ಥಿಗಳು ಇದ್ದಾರೆ. ಒಂದು ಸಾವಿರದಿಂದ ಎರಡು ಸಾವಿರದವರೆಗೆ ಅರ್ಜಿಗಳು ಬರುತ್ತವೆ. ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ಸೀಟು ಸಿಕ್ಕದೇ ಹೊರಗಡೆ ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶೇಕಡ 85ರ ಮೇಲೆ ಮಾರ್ಕ್ಸ್‌ಗಳನ್ನು ತೆಗೆದುಕೊಂಡವರಿಗೆ ಮಾತ್ರ ಸೀಟುಗಳು ಅಲ್ಲಿ ಸಿಗುತ್ತಿರುವುದರಿಂದ ಉಳಿದ ವಿದ್ಯಾರ್ಥಿಗಳು ಏನು ಮಾಡಬೇಕು? ನಾನು ಬಹಳಷ್ಟು ಪ್ರಿನ್ಸಿಪಾಲರುಗಳನ್ನು ಕೇಳಿದ್ದೇನೆ. ತಮಗೆಷ್ಟು ಮಾರ್ಕ್ಸ್ ಸಿಕ್ಕಿದೆ ಎಂದು ಕೇಳಿದರೆ, ಅದಕ್ಕೆ ಉತ್ತರ ಕೊಡಲು ವಿಫಲರಾಗಿದ್ದಾರೆ, ಅವರೆಲ್ಲಾ ಪ್ರಿನ್ಸಿಪಾಲರಾಗಿದ್ದಾರೆ. ಕೇವಲ 45 ರಿಂದ 50 ಮಾರ್ಕ್ಸ್ ತೆಗೆದುಕೊಂಡವರು ಮಾತ್ರ ಪ್ರಿನ್ಸಿಪಾಲರಾಗಿದ್ದಾರೆ. ಆದರೆ ಇವರೇನು ಪಾಪ ಮಾಡಿದ್ದಾರೆ. ಅಲ್ಲಿ ಮಂಗಳೂರಿನಲ್ಲಿ ಪಾಲಿಟೆಕ್ನಿಕ್‌ಗೆ ಸೇರಿದ ಬೇಕಾದಷ್ಟು ಜಮೀನು ಉಂಟು. ನೀವು ಇಂತಹ ಮೂರು ಕಟ್ಟಡಗಳನ್ನು ಅಲ್ಲಿ ಕಟ್ಟಬಹುದು. 40 ವರ್ಷ ಕಳೆಯಿತು. ಆದ್ದರಿಂದ ನಾನು ತಮ್ಮನ್ನು ಕೇಳುತ್ತೇನೆ. ತಾವು ಈ ಸ್ವಾಯತ್ತತೆಯನ್ನು ಘೋಷಣೆ ಮಾಡಿದಾಗ ಎಷ್ಟು ಅನುದಾನ ಕೊಡುತ್ತೀರಿ ಮತ್ತು ಗಡಿ ಕನ್ನಡಿಗರಿಗೆ ಹೊರ ಕನ್ನಡಿಗರಿಗೆ ಶೇಕಡಾ 5 ರಷ್ಟು ರಿಸರ್ವೇಷನ್ ಕೊಡುತ್ತೀರಾ? ಒಂದು ಕಾಲೇಜಿನಲ್ಲಿ ಒಂದು ಸೀಟು ಕೊಡುವುದರಲ್ಲಿ ಏನೂ ಅರ್ಥ ಇಲ್ಲ. ದಯವಿಟ್ಟು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಇದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ದುರಂತ ಎಂದರೆ 95ರಷ್ಟು ಮಾರ್ಕ್ಸ್ ತೆಗೆದುಕೊಂಡವನಿಗೆ ಮಾತ್ರ ಸೀಟು ಕೊಡಲಾಗಿದೆ.

ಅಧ್ಯಕ್ಷರು :— ನೀವು ಕಥೆ ಹೇಳುತ್ತಿದ್ದೀರಿ ಇದು ಜೀರೋ ಅವರ್. ಏನು ನ್ಯೂನ್ಯತೆ ಇದೆ ಅದನ್ನು ಹೇಳಿ.

ಶ್ರೀ ಕೆ. ಜಯರಾಮಶೆಟ್ಟಿ :— ನಾನು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು :— ನೀವು ಬೇಗ ಹೇಳಿ ಮುಗಿಸಿ.

ಶ್ರೀ ಕೆ. ಜಯರಾಮಶೆಟ್ಟಿ :— ದಯವಿಟ್ಟು ಸವಲತ್ತುಗಳನ್ನು ತಮ್ಮ ಹೊಸ ವ್ಯವಸ್ಥೆಯಲ್ಲಿ ಒದಗಿಸಿಕೊಡಿ ಎಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೆ, ಪ್ರಾಯಶಃ ಈ ಕರ್ನಾಟಕ ಪಾಲಿಟೆಕ್ನಿಕ್ ಈ ರಾಜ್ಯದಲ್ಲಿರತಕ್ಕಂಥ ಪಾಲಿಟೆಕ್ನಿಕ್‌ಗಳಲ್ಲಿ ಅತ್ಯಂತ ಉತ್ತಮವಾದಂತಹ ಪಾಲಿಟೆಕ್ನಿಕ್‌ಗಳಲ್ಲಿ ಒಂದು. ಅಲ್ಲಿ ಎಷ್ಟೊಂದು ಬೇಡಿಕೆ ಇದೆ ಅಂದರೆ- ಅಲ್ಲಿ ಕಲಿತವರಿಗೆ ಕೋರ್ಸ್ ಕಂಪ್ಲೀಟ್ ಆಗುವುದಕ್ಕೆ ಮುಂಚೆಯೇ ಅಲ್ಲೇ ಬಂದು ಕಾರ್ಖಾನೆಯವರುಗಳೆಲ್ಲಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಹೋಗುತ್ತಾರೆ. ಈ ವಿಚಾರ ಮಾನ್ಯ ಜಯರಾಮ್ ಶೆಟ್ಟಿ ಅವರಿಗೂ ಗೊತ್ತಿದೆ. ಆದರೆ ಕೆಲವು ಕಾರಣಗಳಿಂದಾಗಿ ನಾವು ಅಲ್ಲಿಗೆ ಬೇಕಾದಂತಹ ಉಪಾಧ್ಯಾರುಗಳನ್ನು ತುಂಬಲಿಕ್ಕೆ ಆಗಿರಲಿಲ್ಲ. ತುಂಬುವಂತಹ ಕೆಲಸ ಈಗ ನಾವು ಮಾಡಿದ್ದೇವೆ. ಈಗಾಗಲೇ 55ರಲ್ಲಿ 29 ಉಪಾಧ್ಯಾರುಗಳು ಬೇರೆಬೇರೆ ಫ್ಯಾಕಲ್ಟಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನೂ 26 ಉಪಾಧ್ಯಾಯರ ಹುದ್ದೆಗಳನ್ನು ತುಂಬಲಿಕ್ಕೆ ಕೆಪಿಎಸ್‌ಸಿ ಮುಖಾಂತರ ತುಂಬತಕ್ಕ ಪ್ರಯತ್ನ ಭರದಿಂದ ನಡೆಯುತ್ತಿದೆ. ಇನ್ನೂ ಕೆಲವು ಹುದ್ದೆಗಳಿಗೆ ತಾಂತ್ರಿಕ ದೋಷ ಇದೆ. ಅಂದರೆ ಅವು ಬ್ಯಾಕ್‌ಲಾಗ್ ಹುದ್ದೆಗಳಾಗಿರುವುದರಿಂದ ತುಂಬಲಿಕ್ಕೆ ಕೂಡ ತೊಂದರೆ ಇದೆ. ಇದರ ಬಗ್ಗೆ ಕೂಡ ನಾನು ಬಹಳ ಕೂಲಂಕುಷವಾಗಿ ಯೋಚನೆ ಮಾಡುತ್ತಿದ್ದೇನೆ. ಇನ್ನೊಂದು ವಿಚಾರ ನಿಮ್ಮ ಗಮನಕ್ಕೆ ತರಬೇಕು. ಅದೇನೆಂದರೆ ಈ ಸಲ ನಾವು ವಿಶ್ವ ಬ್ಯಾಂಕಿನ ಅಡಿಯಲ್ಲಿ ಈ ಪಾಲಿಟೆಕ್ನಿಕ್‌ಗಳಿಗೆ ಖರ್ಚು ಮಾಡಿರತಕ್ಕ ಹಣ, ಅಂದರೆ ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು ಇದಕ್ಕೆ ಉಪಕರಣಗಳಿಗಾಗಿ ಖರ್ಚು ಮಾಡಿರತಕ್ಕದ್ದು 124.53 ಲಕ್ಷ ರೂಪಾಯಿಗಳು. ಪುಸ್ತಕಗಳಿಗಾಗಿ ಅಲ್ಲಿ ಐದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪೀಠೋಪಕರಣಗಳಿಗಾಗಿ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಒಟ್ಟು ಕರ್ನಾಟಕ ಪಾಲಿಟೆಕ್ನಿಕ್ ನಲ್ಲಿ 137.53 ಲಕ್ಷ ರೂಪಾಯಿಗಳು ಅಂದರೆ ಒಟ್ಟು ಒಂದು ಕೋಟಿ 37 ಲಕ್ಷ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಿದ್ದೇವೆ. ಹಾಗೆಯೇ ಮಹಿಳಾ ಪಾಲಿಟೆಕ್ನಿಕ್‌ಗೆ ವಿಶ್ವ ಬ್ಯಾಂಕ್ ಅಸಿಸ್ಟೆನ್ಸ್ ಅಡಿಯಲ್ಲಿ 48.9 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ 30 ಪರ್ಸೆಂಟ್ ಹೆಚ್ಚು ಹೆಣ್ಣು ಮಕ್ಕಳನ್ನು ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ಏನು ಅಡ್ಮಿಷನ್ ಮಾಡಿಕೊಂಡಿದ್ದೇವೆ, ಅವರಿಗೆ ಬೇಕಾದಂತಹ ಹಾಸ್ಟೆಲ್ ಸೌಲಭ್ಯ ಬೇಕು ಎಂದಾದರೆ ಮಹಿಳಾ ಪಾಲಿಟೆಕ್ನಿಕ್ ಇದೆ ಅದು ಅಲ್ಲಿಂದ ಎರಡು ಕಿಲೋ ಮೀಟರ್ ದೂರ ಇದೆ. ಸುಮಾರು ಎರಡೂವರೆ ಕಿಲೋ ಮೀಟರ್ ಒಳಗಡೆ ಇರತಕ್ಕ ಮಹಿಳಾ ಪಾಲಿಟೆಕ್ನಿಕ್‌ನ ಹಾಸ್ಟೆಲ್‌ನಲ್ಲಿ ಸ್ಥಳಾವಕಾಶವನ್ನು ಅವರು ಬೇಕು ಎನ್ನುವುದಾದರೆ ನಾವು

ಕೊಡಲಿಕ್ಕೆ ತಯಾರಿದ್ದೇವೆ ಎನ್ನತಕ್ಕ ವಿಚಾರವನ್ನು ತಮ್ಮ ಮೂಲಕವಾಗಿ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಓ) ಬಿಜಾಪುರ ನಗರದಲ್ಲಿ ಆಸ್ತಿಗಳ ಲೀಸಿಗಳಿಗೆ ಸಮಸ್ಯೆ

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ (ಬಿಜಾಪುರ) :— ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರ ನಗರಸಭೆಯ ಬಗ್ಗೆ ಕಳೆದ ಮೂರ್ನಾಲ್ಕು ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳಿಕೊಂಡು ಬರುತ್ತಿದ್ದೇನೆ. 99 ವರ್ಷ, 60 ವರ್ಷ ಮತ್ತು 30 ವರ್ಷ ಈ ರೀತಿ ಮೂರು ತರಹವಾದ ಲೀಸಿಗಳ ಮೇಲೆ ನಗರಸಭೆಯ ಆಸ್ತಿಗಳನ್ನು ಬ್ರಿಟಿಷ್ ಕಾಲದಿಂದ ಕೊಟ್ಟಿತ್ತು. ಈ ರೀತಿ ಕೊಟ್ಟಂತಹ ಸುಮಾರು 4-5 ಸಾವಿರ ಆಸ್ತಿಗಳಿಗೆ 1965 ರಿಂದ ಅಂದರೆ ಸುಮಾರು 30-35 ವರ್ಷದ ಹಿಂದೆ ಕೊಟ್ಟಂತಹ ಲೀಸ್ ಪೀರಿಯಡ್ ಮುಗಿದಿದೆ. ಆದರೆ ಇತ್ತೀಚೆಗೆ ಮೂರು ನಾಲ್ಕು ವರ್ಷದ ಹಿಂದೆ ಬಂದಂತಹ ನಗರಸಭಾ ಆಯುಕ್ತರು ಆ ಲೀಸ್ ಮುಗಿದಂತಹ ಎಲ್ಲಾ ಆಸ್ತಿಗಳಿಗೆ ರಿಜೀರಿ ಪರವಾನಿಗಿ ಮತ್ತು ಹೊಸ ಕಟ್ಟಡ ಕಟ್ಟುವುದಕ್ಕೆ ಬೇಕಾದಂತಹ ಪರವಾನಿಗಿಯನ್ನು ಬ್ಯಾಂಡ್ ಮಾಡಿದ್ದಾರೆ. ಇವತ್ತು ಆ ಲೀಸ್ ಪ್ರಾಪರ್ಟಿ ಖರೀದಿ ಸಹ ಆಗುತ್ತಾ ಇಲ್ಲ. ಅದರ ಜೊತೆಗೆ ಯಾವುದಾದರೂ ಬ್ಯಾಂಕ್‌ನಲ್ಲಿ ಒತ್ತೆ ಹಚ್ಚಿ ತಮ್ಮ ಅಡಚಣೆಗಳನ್ನು ನೀಗಿಸುವಲ್ಲಿ ಅವರು ಪ್ರಯತ್ನ ಮಾಡಿದರೆ ಅದೂ ಸಹ ಇವತ್ತು ಉಪ ನೋಂದಣಿ ಅಧಿಕಾರಿಗಳಿಂದ ತಡೆ ಆಜ್ಞೆ ತಂದಿದ್ದಾರೆ. ಇದರಿಂದ ಸಂಪೂರ್ಣವಾಗಿ 3-4 ಸಾವಿರ ಕುಟುಂಬಗಳಿಗೆ ತೊಂದರೆ ಆಗಿದೆ. ಮೂರ್ನಾಲ್ಕು ವರ್ಷಗಳಿಂದ ಸತತವಾಗಿ ಈ ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಕಳೆದ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಪೌರಾಡಳಿತ ಸಚಿವರು 15 ದಿವಸಗಳಲ್ಲಿ ಅದನ್ನು ತೆರವು ಮಾಡುತ್ತೇವೆ. ತಪ್ಪಣ ನಾವು ಮುಕ್ತವಾದ ಅವಕಾಶವನ್ನು ಮಾಡಿಕೊಡುತ್ತೇವೆ. ಯಾವುದೇ ರೀತಿಯಾದಂತಹ ತೊಂದರೆ ಆಲ್ಲಿ ಆಗದಂತೆ ನೋಡಿಕೊಳ್ಳುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಇಲ್ಲಿಯವರೆಗೆ ಆದರ ಮೇಲೆ ಯಾವುದೇ ರೀತಿಯ ಕ್ರಮಗಳೂ ಆಗಿಲ್ಲ. ದಯವಿಟ್ಟು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರಕ್ಕೆ ಬಂದಿದ್ದಾಗ ಇದರ ಬಗ್ಗೆ ನಾವು ವಿಷಯವನ್ನು ತಿಳಿಸಿದ್ದೆವು. ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು ಸರ್ಕಾರ ಯಾವಾಗ ಇದನ್ನು ಮಾಡುತ್ತದೆ ಎಂದು ಹೇಳಬೇಕು. ಲೀಸ್ ಪ್ರಾಪರ್ಟಿ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ನಾನು ನಿರ್ದಿಷ್ಟವಾದಂತಹ ಉತ್ತರವನ್ನು ಬಯಸುತ್ತೇನೆ. ಸನ್ಮಾನ್ಯ ಪೌರಾಡಳಿತ ಸಚಿವರು ಇದ್ದಾಗ ಅವಕಾಶವನ್ನು ಕೊಟ್ಟರೆ ಒಳ್ಳೆಯದಾಗುತ್ತದೆಂದು ನನಗೆ ಅನ್ನಿಸುತ್ತಿದೆ. ಏಕೆಂದರೆ ಸಮಸ್ಯೆ ಬಹಳ ಇದೆ.

ಅಧ್ಯಕ್ಷರು :— ಉತ್ತರವನ್ನು ತರಿಸಿಕೊಡುತ್ತಾರೆ.